ಡಿಡಬ್ಲ್ಯೂ ಃ 1

ದಿನಾಂಕ ಃ 22.10.2021 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಎಂ ಎನ್ ಎನ್ ವಕೀಲರಿಂದ,

3 ನೇ ಪ್ರತಿವಾದಿಯೂ ವಾದಿಯರ ವಿರುದ್ಧ ಪ್ರಾಸಂರಿ ನೋಟ್ ಆಧಾರದಲಿ ಹಣದ ವಸೂಲಾತಿಗೆ ಸಲ್ಲಿಸಿದ ದಾವೆಯಲ್ಲಿ ದಾವಾ ಆಸ್ತಿ ಅಟ್ಯಾಚ್ ಮೆಂಟ್ ಆದ ನಂತರ ಈ ದಾವೆಯ 1 ನೇ ಪ್ರತಿವಾದಿಯೂ ಸದರಿ ದಾವೆಯಲ್ಲಿ ಆಕೆಯನ್ನು ಪ್ರತಿವಾದಿಯಾಗಿ ಸೇರಿಸಬೇಕು ಎಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ನಕಲನ್ನು ವಾದಿಯರು ಈ ದಾವೆಯಲ್ಲಿ ಹಾಜರು ಪಡಿಸಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಸದರಿ ಮಧ್ಯಂತರ ಅರ್ಜಿಯಲ್ಲಿ ಒಂದನೆಯ ವಾದಿಯೂ ದಾವಾ ಆಸ್ತಿಯಲ್ಲಿ ಮನೆ ಇದ್ದರು ಸಹ ಖುಲ್ಲಾ ಜಾಗ ಎಂದು ಬರೆಯಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಟ್ಯಾಚ್ ಮೆಂಟ್ ಆಗಿ ಒಂದು ತಿಂಗಳಿಗೆ ಸದರಿ ಆಸ್ತಿಯನ್ನು ನನ್ನ ತಾಯಿ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿಯರು ಆಸ್ತಿಯ ಕ್ಷೇತ್ರ ತಪ್ಪಾಗಿರುವುದನ್ನು ನಿಪಿ -9 ರಂತೆ ತಿದ್ದುಪಡಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ತಿದ್ದುಪಡಿ ಪತ್ರವನ್ನು ನೋಡಿರುವುದಿಲ್ಲ ವಾದಿಯರು ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಿರುತ್ತಾರೆ ಎಂದು ತೋರಿಸಲು ಸಾಮಗ್ರಿಗಳನ್ನು ಖರೀದಿ ಮಾಡಿದ ಬಿಲ್‌ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬಿಲ್‌ಗಳನ್ನು ನಾನು ನೋಡಿದ್ದೇನೆ ಅದನ್ನು ಸೃಷ್ಟಿ ಮಾಡಿರುತ್ತಾರೆ. ವಾದಿಯರು ಹಾಜರು ಪಡಿಸಿದ ಬಿಲ್‌ಗಳು ಅಂದರೆ ನಿಪಿ-31 ರಿಂದ 51 ದಾಖಲೆಯೂ ಸೃಷ್ಟಿ ಮಾಡಿದ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಮನೆ ಕಟ್ಟುವ ಸಮಯದಲ್ಲಿ ನಾನು ಬ್ಯಾಂಕ್ ಗೆ ಹೋಗಿದ್ದೇನು. ಬ್ಯಾಂಕ್ ಗೆ ಹೋದ ತಾರೀಖನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ಮನೆ ಕಟ್ಟುವ ಕಾಲಕ್ಕೆ ಹಣ ಅವಶ್ಯಕತೆ ಇರುವುದರಿಂದ ನಾನು ಬ್ಯಾಂಕ್‌ನಿಂದ ಸಾಲ ಪಡೆಯಲು ಬ್ಯಾಂಕ್ ಹೋಗಿದ್ದೇನು. ಆಸ್ತಿ ಖರೀದಿ ಮಾಡಿದ ಎರಡು-ಮೂರು ತಿಂಗಳಲ್ಲಿ ನಾನು ಸಾಲ ಪಡೆಯಲು ಬ್ಯಾಂಕ್‌ಗೆ ಹೋಗಿದ್ದೇನು.

ನನಗೆ ಮೂರು ಎಕರೆ ಜಮೀನು ಇರುತ್ತದೆ. ನನಗೆ ಮೂರು ಜಮೀನು ಇದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನನಗೆ ಮೂರು ಎಕರೆ ಜಮೀನು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಎಲ್ಲರೂ ಶಾಮಿಲಾಗಿ ಸುಳ್ಳು ಖರೀದಿ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ ನಿಡಿ33 ರಿಂದ 124 ಬಿಲ್ ಗಳನ್ನು ಕೇಸ್ ಗೆ ಅನುಕೂಲವಾಗಲಿ ಎಂದು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಆರೋಗ್ಯವಾಗಿದ್ದರೂ ಸಹ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ನಿಜ ಬಯಲಾಗುತ್ತದೆ ಎನ್ನುವ ಉದ್ದೇಶದಿಂದ ಅವರ ಪರವಾಗಿ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಒಂದನೆ ಪ್ರತಿವಾದಿ ಮತ್ತು ಅವರ ಗಂಡ ಹಾಗೂ ದಸ್ತಾವೇಜು ಬರಹಗಾರಾದ ರಾಜಶೇಖರವರು ಎರಡನೇ ಪ್ರತಿವಾದಿಗೆ ಸುಳ್ಳು ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನಾನು ಪ್ರತಿಪಾದಿಸುತ್ತಿದ್ದು ಆ ಬಗ್ಗೆ ಸದರಿ ಖರೀದಿ ಪತ್ರವನ್ನು ರದ್ದು ಮಾಡಬೇಕು ಎಂದು ನೀವು ಕೇಳಿಕೊಂಡಿದ್ದಿರಾ ಎಂದರೆ ಸಾಕ್ಷಿಯೂ ರದ್ದು ಮಾಡಲು ನಾನು ಕೇಳಿಕೊಂಡಿರುವುದಿಲ್ಲ ಸದರಿ ಖರೀದಿ ಪತ್ರದ ಕ್ರಯದ ಹಣವನ್ನು ವಾಪಸ್ಸು ಕೊಡಲು ಕೇಳಿಕೊಂಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. .ವಾದಿಯರು ದಾವಾ ಆಸ್ತಿಯ ಮಾಲಿಕರು ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಖರೀದಿ ಪತ್ರಕ್ಕೆ ಮತ್ತು ಒಂದನೆಯ ಪ್ರತಿವಾದಿಯ ಖರೀದಿ ಪತ್ರಕ್ಕೆ ಯಾವುದೇ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ.. 2 ನೇ ವಾದಿಯನ್ನು ನನಗೆ ನ್ಯಾಯಾಲಯಕ್ಕೆ ಬಂದ ನಂತರ ಗೊತ್ತಾಗಿರುತ್ತದೆ. 2 ನೇ ವಾದಿಯೂ ಸಿರುಗುಪ್ಪದಲ್ಲಿ ಚೀಟಿ ವ್ಯವಹಾರ ಮಾಡಿ ಸಾರ್ವಜನಿಕರಿಗೆ ಮೋಸ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಈ ದಾವೆಯನ್ನು ಹಾಕಿರುವ ಕಾರಣ ಅವರಿಗೆ ಹೆದರಿಸಲು ನಾನು ಕ್ರಿಮಿನಲ್ ಕೇಸ್ ಮಾಡಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿಯೂ ಮುಂದುವರೆದು ನನಗೆ ಮೋಸ ಮಾಡಿರುವ ಕಾರಣ ನಾನು ಕ್ರಿಮಿನಲ್ ಕೇಸ್ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಪ್ರತಿವಾದಿಯೆಲ್ಲರೂ ಶಾಮಿಲಾಗಿ ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಖರೀದಿ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ ಪ್ರತಿವಾದಿ ಒಂದು ಮತ್ತು ನಾಲ್ಕರವರ ಮಾತು ಕೇಳಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯನ್ನು ಖರೀದಿ ಮಾಡಲು ನಮಗೆ ಆರ್ಥಿಕ ಶಕ್ತಿ ಇಲ್ಲ ಎಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಯ ಮಾಲಿಕರು ಎಂದರೆ ಸರಿಯಲ್ಲ. ನಮ್ಮ ಎರಡು ಖರೀದಿ ಪತ್ರಗಳು ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ

ಮರುವಿಚಾರಣೆ ಃ ಇರುವುದಿಲ್ಲ.

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.